ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ 4ನೇ ಆಗಸ್ಟ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸುರತ್ಕಲ್‌ನಲ್ಲಿರುವ ಪಶುವೈದ್ಯಾಲಯದ ಉನ್ನತೀಕರಣ

302 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ಲಿನಲ್ಲಿರುವ ಪಶುವೈದ್ಯ ಶಾಲೆ ಉನ್ನತೀಕರಿಸಲಾಗಿದ್ದು ಅಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಈ ಪಶು ವೈದ್ಯಾಲಯದ ಎಷ್ಟು ಸಿಬ್ಬಂದಿಗಳು ಇದ್ದಾರೆ. ಈ ಸಂಖ್ಯೆ ಸಾಕಷ್ಟಿದೆಯೇ?

ಇ) ಸಿಬ್ಬಂದಿ ವರ್ಗದವರ ವಸತಿ ಗೃಹಕ್ಕಾಗಿ ಸ್ಥಳ ಖರೀದಿ ನಡೆದಿದೆಯೆ, ನಡೆದಿದ್ದರೆ ಎಲ್ಲಿ?

ಶ್ರೀ ಬಿ. ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಹುದ್ದೆಗಳ ವಿವರ — ಮಂಜೂರಾದವು — ಭರ್ತಿಯಾದವು.

ಅ) ಪಶು ವೈದ್ಯಾಧಿಕಾರಿ	1	1
ಆ) ಪಶು ಪರೀಕ್ಷಕರು	1	1
ಇ) ಪಶು ಸಹಾಯಕರು	1	-
ಈ) 'ಡಿ' ದರ್ಜೆ ನೌಕರರು	2	1

2 ಹುದ್ದೆಗಳು ಕೊರತೆ ಇರುತ್ತದೆ.

ಇ) ಇಲ್ಲ.

ಶ್ರೀ ಕುಂಬ್ಳೆ ಸುಂದರ್‌ರಾವ್ : ಮಾನ್ಯ ಅಧ್ಯಕ್ಷರೆ, ಸುರತ್ಕಲ್‌ನಲ್ಲಿರುವ ಪಶು ವೈದ್ಯ ಶಾಲೆ ಉನ್ನತೀಕರಿಸಲಾಗಿದ್ದು, ಅಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ, ಇದಕ್ಕೆ ಸಚಿವರು 'ಇಲ್ಲ'ವೆಂದು ಉತ್ತರ ಕೊಟ್ಟಿದ್ದಾರೆ.'ಇಲ್ಲ' ಎಂದು ಹೇಳಿದರೆ, ಗಮನಿಸಿಲ್ಲವೆಂದೋ ಅಥವಾ ಪರೀಕ್ಷೆ ಮಾಡಲಿಲ್ಲವೆಂದೂ ಅಥವಾ ನನ್ನ ಸಂದೇಹ ನಿರಾಧಾರವೆಂದೋ ಎನ್ನುವುದು ನನಗೆ ತಿಳಿಯಲಿಲ್ಲ. ಉನ್ನತಿಗೆ ಏರಿಸಿದೆಯೋ ಇಲ್ಲವೋ ಎನ್ನುವುದು ಕೂಡ ನನಗೆ ಗೊತ್ತಾಗಲಿಲ್ಲ. ಸ್ಪಷ್ಟ ಉತ್ತರ ಕೊಡಬೇಕಾದ ಸಂದರ್ಭದಲ್ಲಿ ಒಂದೇ ಶಬ್ದದಲ್ಲಿ ಇಲ್ಲವೆಂದು ಹೇಳಿಬಿಟ್ಟರೆ, ನಾವು ಗೊಂದಲದಲ್ಲಿ ಬೀಳುತ್ತೇವೆ.

ಅಧ್ಯಕ್ಷರು : ಸಾಕಷ್ಟು ಸ್ಥಳಾವಕಾಶ ಇಲ್ಲದೇ ಇರತಕ್ಕಂಥ ವಿಷಯ ಅವರ ಗಮನಕ್ಕೆ ಬಂದಿಲ್ಲ, ಈಗ ತಾವು ತಂದಿದ್ದೀರಿ ಅವರು ಸೂಕ್ತ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಕುಂಬ್ಳೆ ಸುಂದರ್ ರಾವ್ : ಸ್ವಾಮಿ, ಇಲಾಖಾ ಮಂತ್ರಿಗಳು ಇಲ್ಲವೆಂದು ಉತ್ತರ ಕೊಟ್ಟರೆ, ಅವರು ನಮಗೆ ದಾರಿತಪ್ಪಿಸಿದ ಹಾಗೆ ಆಗುತ್ತದೆ, ನಾನು ಕೇಳಿದ ಪ್ರಶ್ನೆ ನಿರಾಧಾರ ಎಂದಾಗುತ್ತಿದೆ, ಆದ್ದರಿಂದ ಪ್ರಶ್ನೆ ಅನಾಥವಾಗಬಾರದು, ಈ ದೃಷ್ಟಿಯಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ ನಿಮ್ಮ ಮಾಹಿತಿ ಸಂಗ್ರಹ ಏನಿದೆ, ಅದು ಸರಿಯಾದ ರೀತಿಯಲ್ಲಿ ಆಗಿಲ್ಲ, ಏಕೆಂದರೆ ನಾನು ಅದೇ ಸ್ಥಳದವನು ಮತ್ತು ಅದೇ ಕ್ಷೇತ್ರದವನು ಆಗಿರುವುದರಿಂದ ದಯಮಾಡಿ ಸ್ಪಷ್ಟವಾದ ಮಾಹಿತಿ ತರಿಸಿ ಕೊಡಿ. ಎರಡನೇಯದಾಗಿ ಸಿಬ್ಬಂದಿ ಕಡಿಮೆ ಇದೆ. ಹಾಗೂ ಸುರತ್ಕಲ್ ಕ್ಷೇತ್ರದಲ್ಲಿ ಪಶು ವೈದ್ಯಶಾಲೆಗಳ ಸಂಖ್ಯೆಯೂ ಕಡಿಮೆ ಇದೆ. ಆ ಇಡೀ ಏರಿಯಾಕ್ಕೆ ಇರುವಂಥಾದ್ದು ಒಂದೇ ಒಂದು ಪಶು ವೈದ್ಯಶಾಲೆ. ಅಲ್ಲಿ ಸಿಬ್ಬಂದಿಗಳನ್ನು ಭರ್ತಿ ಮಾಡುವ ವಿಷಯದ ಬಗ್ಗೆ ನೀವು ಆಲೋಚನೆ ಮಾಡಿದ್ದೀರಾ? ಕೊನೆಯದಾಗಿ ಸಿಬ್ಬಂದಿಗಳ ವಸತಿ ಗೃಹ ಇದರ ಬಗ್ಗೆ ನಮ್ಮ ಯೋಚನೆ ಇಲ್ಲವೆಂದು ಹೇಳುತ್ತೀರಿ, ಎಲ್ಲಾ ಖಾತೆಗಳಲ್ಲಿ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳ ವ್ಯವಸ್ಥೆಯಾಗುತ್ತದೆ, ಪಶುಸಂಗೋಪನೆ ಇಲಾಖೆಯವರು ಏಕೆ ಮನಸ್ಸು ಮಾಡುವುದಿಲ್ಲ? ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು, ನಿಮ್ಮ ಖಾತೆಯ ನೀತಿ ಏನು, ಅದರ ಬಗ್ಗೆ ಹೇಳಿ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ನಾವು ಈಗಾಗಲೇ ಉತ್ತರದಲ್ಲಿ ತಿಳಿಸಿರುವಂತೆ ಉನ್ನತೀಕರಿಸಿದ್ದುದು ನಿಜ. ಅಲ್ಲಿ ಈ ಮೊದಲು ಒಂದು ಕೃತಕ ಗರ್ಭಧಾರಣ ಕೇಂದ್ರ ಇತ್ತು. ಅದನ್ನು ನಾವು ಪಶು ಚಿಕಿತ್ಸಾಲಯವಾಗಿ ಉನ್ನತೀಕರಿಸಿದ್ದೇವೆ. ಇದಕ್ಕೆ ಈಗಾಗಲೇ 2 ಲಕ್ಷ ರೂ. ಕಟ್ಟಡ ಆಗಿದೆ, ಇದಕ್ಕೆ ಜಾಗ ಎಷ್ಟು ಇದೆ ಎಂದು ಕೇಳಿದ್ದೀರಿ, ಈಗಾಗಲೇ ನಾವು ಇದಕ್ಕೆ 5 ಸೆಂಟ್ಸ್ ಜಾಗವನ್ನು ಕಾದಿರಿಸಿದ್ದೇವೆ. ಹುದ್ದೆಗಳ ಬಗ್ಗೆ ಕೇಳಿದ್ದೀರಿ ಅಲ್ಲಿ 5 ಪೋಸ್ಟ್ ಇತ್ತು 2 ಹುದ್ದೆಗಳು ಖಾಲಿ ಇದೆ, ಕರ್ನಾಟಕ ರಾಜ್ಯದಲ್ಲಿ ಸುಮಾರು 304 ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ, ಈಗಾಗಲೇ ನಾವು ಕೆಪಿಎಸ್‌ಸಿಗೆ ಕೇಳಿಕೊಂಡಿದ್ದರ ಮೇರೆಗೆ ಅವರು ಸಂದರ್ಶನವನ್ನು ನಾಳೆಯಿಂದ 18ನೇ ತಾರೀಖಿನವರೆಗೆ ಕರೆದಿದ್ದಾರೆ. ಸುಮಾರು 200 ಜನರನ್ನು ಸಂದರ್ಶನ ಮಾಡಿ ಕೊಡುತ್ತಾರೆ. ಅವರನ್ನು ಖಾಲಿ ಇರುವ ಜಾಗಕ್ಕೆ ಹಾಕಿ ಬಿಡುತ್ತಾರೆ, ಇನ್ನು ಉಳಿದಿರತಕ್ಕಂಥ ಪಶು

ಪರೀಕ್ಷಕರು ಅಥವಾ ಪಶು ಸಹಾಯಕರು ಮತ್ತು ನಾಲ್ಕನೇ ದರ್ಜೆ ನೌಕರರು, ಅದನ್ನೂ ಕೂಡ ಈಗ ಮಾಡುತ್ತಾ ಇದ್ದೇವೆ, ತಕ್ಷಣ ಮಾಡಿ ಕೊಡುತ್ತೇವೆ.

ಅಧ್ಯಕ್ಷರು : ಸಿಬ್ಬಂದಿ ವರ್ಗದವರ ವಸತಿ ಬಗ್ಗೆ.

ಶ್ರೀ ಬಿ.ಬಿ. ನಿಂಗಯ್ಯ : ತಮಗೆ ಗೊತ್ತಿರುವಂತೆ ನಮ್ಮ ಇಲಾಖೆ ಜನಾರೋಗ್ಯಕ್ಕೆ ಸಮಾನವಾದ ಒಂದು ಇಲಾಖೆ, ರಾಜ್ಯದಲ್ಲಿ ಅನುಕೂಲ ಮಾಡಿ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ, ಮುಂದೆ ಕ್ರಮ ಕೈಗೊಳ್ಳುತ್ತೇವೆ.

ವಿಟ್ಲ ಮತಕ್ಷೇತ್ರದ ನರಹರಿ ಬೆಟ್ಟ ಕುರಿತು

303 - ಶ್ರೀ ಎ. ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮತ ಕ್ಷೇತ್ರಕ್ಕೆ ಸೇರಿದ ನರಹರಿಬೆಟ್ಟವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಎಲ್ಲಾ ತರಹದ ಅನುಕೂಲತೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಪ್ರವಾಸೋದ್ಯಮ ಕೇಂದ್ರವನ್ನಾಗಿ ಮಾಡಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯಸಚಿವರು) :

ಅ) ಹೌದು.

ಆ) ರಾಜ್ಯದಲ್ಲಿ ದಿನಾಂಕ 1-6-97ರಿಂದ ನೂತನ ಪ್ರವಾಸೋದ್ಯಮ ಕಾರ್ಯನೀತಿ ಜಾರಿಗೆ ಬಂದಿದೆ. ಇದರಂತೆ ವಿಟ್ಲದ ನರಹರಿ ಬೆಟ್ಟವನ್ನು 'ಬಿ' ಗುಂಪಿಗೆ ಸೇರಿಸಲಾಗಿದೆ. ಈ ಸ್ಥಳದಲ್ಲಿ ಸ್ಥಾಪಿಸಲಾಗುವ ಪ್ರವಾಸೋದ್ಯಮ ಯೋಜನೆಗಳಿಗೆ ಶೇಕಡ 15ರಷ್ಟು ಗರಿಷ್ಟ ರೂ. 15.00 ಲಕ್ಷಗಳನ್ನು ಬಂಡವಾಳ ಹೂಡಿಕೆ ಸಬ್ಸಿಡಿ ನೀಡಲಾಗುವುದು ಹಾಗೂ 3 ವರ್ಷದವರೆಗೆ ಮಾರಾಟ, ತೆರಿಗೆ, ವಿಲಾಸಿ ತೆರಿಗೆ, ವಿನಾಯಿತಿ ಮತ್ತು ವಿದ್ಯುತ್ ದರಗಳಲ್ಲಿ ರಿಯಾಯಿತಿ ನೀಡಿ ಪ್ರೋತ್ಸಾಹಿಸಲಾಗುವುದು.

ಶ್ರೀ ರುಕ್ಮಯ್ಯ ಪೂಜಾರಿ : ಸನ್ಮಾನ್ಯ ಅಧ್ಯಕ್ಷರೇ, ನರಹರಿ ಬೆಟ್ಟ ಅತ್ಯಂತ ಎತ್ತರದಲ್ಲಿರುವಂಥ ಒಂದು ಗುಡ್ಡ ಪ್ರದೇಶ. ಅಲ್ಲಿ ಈಶ್ವರ ದೇವಸ್ಥಾನ ಇದೆ. ಹಿಂದೆ ಪಾಂಡವರು ಇದ್ದಾಗ, ಆ ಬೆಟ್ಟಕ್ಕೆ ಬಂದು, ಅಲ್ಲಿ ಶಂಖ ಚಕ್ರ ಗಧಾ ಪದ್ಮ ಕೆರೆಯನ್ನೂ ನಿರ್ಮಾಣ ಮಾಡಿದ್ದಾರೆ, ಈಗ ಆಟಿ ಅಮಾವಾಸ್ಯೆ ಮತ್ತು ಸೋಣಾ ಅಮಾವಾಸ್ಯೆ ಸಂದರ್ಭದಲ್ಲಿ ಸಾವಿರಾರು ಜನ ಬಂದು, ಅಲ್ಲಿ ತೀರ್ಥಸ್ನಾನ ಮಾಡಿ, ದೇವರ ಅನುಗ್ರಹವನ್ನು ಪಡೆಯುತ್ತಿದ್ದಾರೆ. ಅದು ಮಾತ್ರವಲ್ಲ., ಅದರ ಸುತ್ತಮುತ್ತ ಕಾಡು ಪ್ರದೇಶ ಇದೆ. ಪಕ್ಕದಲ್ಲೇ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತಿದೆ, ಪಕ್ಕದಲ್ಲೇ ನೇತ್ರಾವತಿ ನದಿ ಹರಿಯುತ್ತಿದೆ. ಈ ಎಲ್ಲಾ ದೃಷ್ಟಿಯಿಂದ ಅದೊಂದು ಅತ್ಯಂತ ಆಕರ್ಷಣೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡುವುದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಇದೆ. ಇದನ್ನು ಆದಷ್ಟುಬೇಗ ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂದು ನಾನು